ಎಫ್ ಡಿ ಸಿ ನಂಃ 12/2014
ಪಿ ಡಬ್ಲ್ಯೂಃ 1
ದಿನಾಂಕ 19-02-2020 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಎದುರುದಾರರ ಪರಃ ಶ್ರೀ ಯು ಎಸ್ ವಕೀಲರಿಂದಃ

1 ಮತ್ತು 2 ನೇ ಎದುರುದಾರರು ಮೈಸೂರಿನಲ್ಲಿ ವಾಸ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎದುರುದಾರರಿಬ್ಬರೂ ಎಲ್ಲಿ ವಾಸ ಮಾಡುತ್ತಿದ್ದಾರೆಂದು ನನಗೆ ಗೊತ್ತಿಲ್ಲ, ಆದರೆ 1 ನೇ ಎದುರುದಾರರು ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಾರೆ, 2 ನೇ ಎದುರುದಾರರು ಅಮೇರಿಕಾದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ನ್ಯಾಯಾಲಯಕ್ಕೆ ನಾನು ಅರ್ಜಿ ಹಾಕಿಲ್ಲ, 1 ನೇ ಎದುರುದಾರರೇ ಹಾಕಿರುತ್ತಾರೆ. ಈ ನ್ಯಾಯಾಲಯದಲ್ಲಿ ಡಿಕ್ರಿಯಾಗಿರುವ ವಿಚಾರ ನನಗೆ ಗೊತ್ತು. ಎಫ್ ಡಿ ಪಿ ನಂ.19/2008 ರಲ್ಲಿ ನನಗೆ ನೋಟೀಸು ಜಾರಿಯಾಗಿತ್ತು ಎಂದರೆ ಸರಿಯಲ್ಲ. ಟಿ ವಿ ಅಶೋಕ್ ಕುಮಾರು, ವಕೀಲರು ನನಗೆ ಗೊತ್ತು, ಅವರು ಮರಣ ಹೊಂದಿದ್ದಾರೆ ಎಂದರೆ ನಿಜ. ನಾನು ಎಫ್ ಡಿ ಪಿ ನಂ.19/2008 ರಲ್ಲಿ ನ್ಯಾಯಾಲಯಕ್ಕೆ ಹಾಜರಾಗಿದ್ದೆ ಎಂದರೆ ಸರಿಯಲ್ಲ.

ಎಫ್ ಡಿ ಪಿ ನಂ.19/2008 ರಲ್ಲಿ ಸಲ್ಲಿಸಲಾಗಿದದ ವಕಾಲತ್ ನ ದೃಡೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಅದನ್ನು ನಾನೇ ಸಲ್ಲಿಸಿದ್ದೆ ಎಂದು ಗುರುತಿಸದ ಮೇರೆಗೆ ಅದನ್ನು **ನಿಆರ್-1** ಎಂದು ಗುರುತಿಸಲಾಯಿತು. ಎಫ್ ಡಿ ಪಿ ನಂ.19/2008 ರ ಆದೇಶದ ವಿರುದ್ದ ನಾನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿವಿಷನ್

ಪಿಟಿಷನ್ 53/2011 ರಂತೆ ಸಲ್ಲಿಸಿದ್ದೆ ಎಂದರೆ ನಿಜ. ಆ ರೀತಿ ನಾನು ಸಲ್ಲಿಸಿದ್ದ ಅರ್ಜಿಯನ್ನು ನಾನು ವಜಾಮಾಡಿಕೊಂಡಿದ್ದೇನೆ ಎಂದರೆ ನಿಜ. ಆದರೆ ಯಾವ ವರ್ಷದಲ್ಲಿ ವಜಾಮಾಡಿಕೊಂಡಿದ್ದೇನೆಂದು ನನಗೆ ಈಗ ನೆನಪಿಲ್ಲ. ರಿವಿಷನ್ ಪಿಟಿಷನ್ ನಂ.53/2011 ನ್ನು ವಜಾಗೊಳಿಸಿಕೊಳ್ಳುವ ಮೊದಲು ಅದನ್ನು ಸರಿಯಾದ ನ್ಯಾಯಾಲಯದಲ್ಲಿ ಹಾಕಿಕೊಳ್ಳುತ್ತೇವೆಂದು ಅನುಮತಿ ಪಡೆದುಕೊಂಡಿಲ್ಲ.

ಎಫ್ ಡಿ ಪಿ ನಂ.19/2008 ರಲ್ಲಿ ಅರ್ಜಿಯನ್ನು ಪುರಸ್ಕರಿಸಿ ಡಿಕ್ರಿ ಮಾಡಲಾಗಿದೆ ಎಂದರೆ ಅದು ನನಗೆ ಈಗ ನೆನಪಿಲ್ಲ. ಎಫ್ ಡಿ ಪಿ ನಂ.19/2008 ರಲ್ಲಿ ಆದೇಶವಾಗಿರುವಂತೆ ಸದರಿ ಅರ್ಜಿಯಲ್ಲಿರುವ ಐಟಂ ನಂ.3 ಆಸ್ತಿಯನ್ನು 2 ನೇ ಎದುರುದಾರರಿಗೆ ನೀಡಿರುವುದರಿಂದ ಅದರ ಮೇರೆಗೆ ಜಾರಿ ಅರ್ಜಿಯನ್ನು ಸಲ್ಲಿಸಲಾಗಿತ್ತು ಎಂದರೆ ನಿಜ. ಸದರಿ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯಾಗಿರುತ್ತದೆ. ಜಾರಿ ಅರ್ಜಿ ಸಂಖ್ಯೆ 92/2010 ರಲ್ಲಿ ಅಶೋಕ್ ಕುಮಾರ್, ವಕೀಲರನ್ನು ನೇಮಿಸಿಕೊಂಡು ವಕಾಲತ್ ಸಲ್ಲಿಸಲಾಗಿತ್ತು ಎಂದರೆ ನಿಜ. ಸದರಿ ವಕಾಲತ್ತಿನ ದೃಡೀಕೃತ ಪ್ರತಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು **ನಿಆರ್-2** ಎಂದು ಗುರುತಿಸಲಾಯಿತು.

2 ನೇ ಎದುರುದಾರರು ಜಾರಿಅರ್ಜಿ ಸಂಖ್ಯೆ 92/2010 ರಲ್ಲಿ ಹಾಜರಾಗದ ಕಾರಣ ವಜಾವಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಾರಿಅರ್ಜಿಯಲ್ಲಿ ನಾನು ಯಾವುದೇ ತಕರಾರು ಸಲ್ಲಿಸಿರಲಿಲ್ಲ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರಗಳು ನನಗೆ ಗೊತ್ತಿದ್ದರೂ

ಸಹ ದುರುದ್ದೇಶದಿಂದ ಸದರಿ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. 2ನೇ ಎದುರುದಾರರು ಅಮೇರಿಕಾದಲ್ಲಿ ಎಷ್ಟು ವರ್ಷಗಳಿಂದ ಇದ್ದಾರೆಂದು ನನಗೆ ಗೊತ್ತಿಲ್ಲ, 1ನೇ ಎದುರುದಾರರು 10-15 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. 3ನೇ ಎದುರುದಾರರು ಮೈಸೂರಿನ ಹೆಬ್ಬಾಳಿನಲ್ಲಿರುವ ಪಿ ಜಿ ಒಂದರಲ್ಲಿ ವಾಸ ಇದ್ದಾರೆ.

ಸದರಿ ಪ್ರಕರಣದಲ್ಲಿ ಸರ್ವೆಯರ್ ಮೂರು ಆಸ್ತಿಗಳನ್ನು ಅಳತೆ ಮಾಡುವ ಸಲುವಾಗಿ ಬಂದಿದ್ದಾಗ ನಾನು ಹಾಜರಿದ್ದೆ. ಸದರಿ ಅರ್ಜಿಯಲ್ಲಿರುವ 3ನೇ ಆಸ್ತಿಯನ್ನು ತನ್ನ ಸ್ವಾಧೀನಕ್ಕೆ ಕೊಡಿಸಬೇಕೆಂದು 2ನೇ ಎದುರುದಾರರು ಜಾರಿ ಅರ್ಜಿ ಸಂಖ್ಯೆ 23/2013ರಂತೆ ಸಲ್ಲಿಸಿದ್ದು, ಅದರಲ್ಲಿ ಅವರಿಗೆ ಆಸ್ತಿ ಸ್ವಾಧೀನ ಕೊಡುವಂತೆ ಆದೇಶ ಮಾಡಿದ್ದರ ವಿರುದ್ದ ನಾನು ತಡೆಯಾಜ್ಞೆ ಪಡೆದಿದ್ದೇನೆ. ಎಫ್ ಡಿ ಪಿ ನಂ.19/2008ರ ಆದೇಶದ ವಿರುದ್ದ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುವುದನ್ನು ಹೊರತು ಪಡಿಸಿ ಬೇರೆ ಎಲ್ಲಿಯೂ ಅರ್ಜಿ ಸಲ್ಲಿಸಿಲ್ಲ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರದನ್ಯಾದಂ., ಕಡೂರು.